371(ಜೆ) ಆದೇಶಗಳ ಅನುಷ್ಠಾನ ಕುರಿತ ಸಂಪುಟ ಉಪ ಸಮಿತಿ ಸಭೆ

ಪ್ರಿನ್ಸಿಪಾಲ್‌ಗಳ 313 ಹುದ್ದೆ ಆಯ್ಕೆ ಪಟ್ಟಿ ಪುನರ್ ಪರಿಶೀಲನೆಗೆ ಸೂಚನೆ | ಸಚಿವ ಪ್ರಿಯಾಂಕ್ ಖರ್ಗೆ ಅಧ್ಯಕ್ಷತೆಯಲ್ಲಿ ಸಭೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದದಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂದರ್ಭದಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ 371 (ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಮತ್ತು ಪರಾಮರ್ಶೆ ಕುರಿತ ಸಂಪುಟ ಉಪ ಸಮಿತಿ ಅಧ್ಯಕ್ಷರಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿತು.

ಉನ್ನತ ಶಿಕ್ಷಣ ಇಲಾಖೆ ಮೂಲಕ ಪ್ರಥಮ ದರ್ಜೆ ಕಾಲೇಜುಗಳ 310 ಹುದ್ದೆಗಳ ಆಯ್ಕೆ ಇತ್ತೀಚೆಗೆ ನಡೆದಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಲೋಪವಾಗಿದೆ ಎಂದು ಕೆಲವು ಅಭ್ಯರ್ಥಿಗಳು ಉಪಸಮಿತಿಯ ಅಧ್ಯಕ್ಷರಾದ ಪ್ರಿಯಾಂಕ್ ಖರ್ಗೆ ಅವರಿಗೆ ದೂರು ನೀಡಿದ್ದು, ಈ ಸಂಬಂಧದಲ್ಲಿ ಇಂದು ಸಚಿವ ಸಂಪುಟದ ಉಪ ಸಮಿತಿ ಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯ ಸದಸ್ಯರಾದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಭಾಗವಹಿಸಿ ಹಲವಾರು ಸಲಹೆ ಸೂಚನೆಗಳನ್ನು ನೀಡಿದರು.

ಉನ್ನತ ಶಿಕ್ಷಣ ಇಲಾಖೆ ಮೂಲಕ ಪ್ರಥಮ ದರ್ಜೆ ಕಾಲೇಜುಗಳ 310 ಹುದ್ದೆಗಳ ಆಯ್ಕೆ ಇತ್ತೀಚೆಗೆ ನಡೆದಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಡಿಪಿಎಆರ್ ನೀಡಿರುವ ಸ್ಪಷ್ಟ ನಿರ್ದೇಶನಗಳನ್ನು ಪಾಲಿಸುವಲ್ಲಿ ಲೋಪವಾಗಿದೆ ಎಂಬುದನ್ನು ಮನಗಂಡ ಆಯ್ಕೆ ಸಮಿತಿ ಆಯ್ಕೆ ಪಟ್ಟಿಯನ್ನು ಮರು ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಿತು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೊರಡಿಸಿರುವ ಸುತ್ತೋಲೆಗಳನ್ನು ಕಡ್ಡಾಯವಾಗಿ ಪಾಲಿಸಲು ಅಧಿಕಾರಿಗಳಿಗೆ ಸೂಚಿಸಿದ ಸಮಿತಿಯು ತಪ್ಪಿದಲ್ಲಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬ ಎಚ್ಚರಿಕೆಯನ್ನು ನೀಡಿತು.

ಸಭೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪ್ರ. ಕಾರ್ಯದರ್ಶಿ ಖುಷ್ಬು ಚೌಧರಿ, ಡಿಪಿಎಆರ್ ಪ್ರ. ಕಾರ್ಯದರ್ಶಿ ಕೆ.ಜಿ.ಜಗದೀಶ್, ಉನ್ನತ ಶಿಕ್ಷಣ ಇಲಾಖೆಯ ಆಯುಕ್ತೆ ಮಂಜುಶ್ರೀ ಭಾಗವಹಿಸಿದ್ದರು.

ಮಿರಾಜಪಾಶಾ ವಿರಚಿತ ಅಜ್ಮೀರ ಆತ್ಮಯಾನ ಉತ್ತಮ ಪುಸ್ತಕ

ಹಸನ್ ಅಲಿ ಅವರ ಪ್ರವಾಸ ಕಥನ ಲೋಕಾರ್ಪಣೆಗೊಳಿಸಿ ಡಾ.ಎಚ್.ಟಿ.ಪೋತೆ ಅಭಿಮತ

• **ಕನ್ನಡಪ್ರಭ ವಾರ್ತೆ** ಚಿಂಚೋಳಿ

ಹಳೆ ಮೈಸೂರ ಭಾಗದಲ್ಲಿ ಸಾಹಿತಿಗಳು ಕಡಿಮೆ ಇದ್ದರೂ ಅಭಿಮಾನ ಹೆಚ್ಚು. ಆದರೆ ನಮ್ಮ ಭಾಗದಲ್ಲಿ ನೃಪತುಂಗಕವಿರಾಜ ಮಾರ್ಗ ಅನೇಕ ಕವಿಗಳಿದ್ದರೂ ನಮ್ಮ ಪ್ರದೇಶದಲ್ಲಿ ಅಭಿಮಾನ ಕಡಿಮೆ ಎಂದು ಡಾ.ಎಚ್.ಟಿ,ಪೋತೆ ಹೇಳಿದರು.

ಸರ್ಕಾರಿ ಪ್ರಥಮದರ್ಜೆ ಕಾಲೇಜು ಸಭಾಂಗಣದಲ್ಲಿ ಕನ್ನಡ ವಿಭಾಗದಲ್ಲಿ ಬೆರಗು ಪ್ರಕಾಶನ ಕರಣಿ ಸಂಯುಕ್ತಾಶ್ರಯದಲ್ಲಿ ಡಾ. ಮಿರಾಜಪಾಶಾ ಹಸನ್ ಅಲಿ ವಿರಚಿತ ಅಜ್ಮೀರ್ ಆತ್ಮಯಾನಾ ಪ್ರವಾಸ ಕಥನ ಲೋಕಾರ್ಪಣೆರ್ಪಣೆ ಮಾಡಿ ಮಾತನಾಡಿದರು.

ಚಿಂಚೋಳಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಸಭಾಂಗಣದಲ್ಲಿ ಡಾ. ಮಿರಾಜಪಾಶಾ ಹಸನಲಿ ಅವರು ಬರೆದ ಅಜ್ಮೀರ್ ಗೆ ಆತ್ಮಯಾನಾ ಪ್ರವಾಸ ಕಥನವನ್ನು ಡಾ. ಹೆಚ್.ಟಿ.ಪೋತೆ ಲೋಕಾರ್ಪಣೆ ಮಾಡಿದರು. ಪ್ರೊ. ಬಸವರಾಜ ಕೋನೇರಿ, ಡಾ. ಶ್ರೀಶೈಲ ನಾಗರಾಳ, ಡಾ. ಬಸವರಾಜೇಶ್ವರಿ ಹಾಲು ಇದ್ದರು.

ಡಾ. ಮಿರಾಜಪಾಶಾ ಹಸನ್ ಅಲಿ ಅವರ ವಿರಚಿತ ಅಜ್ಮೀರ ಆತ್ಮಯಾನಾ ಉತ್ತಮವಾದ ಪುಸ್ತಕವಾಗಿದೆ. ವಿದ್ಯಾರ್ಥಿಗಳು ಪುಸ್ತಕವನ್ನು ಓದ ಬೇಕು ಎಂದು ಡಾಣಹೆಚ್.ಟಿ.ಪೋತೆ ಹೇಳಿದರು.

ಗುಲಬರ್ಗಾ ವಿವಿ ಪ್ರಾಧ್ಯಾಪಕ ಡಾ. ಶ್ರೀಶೈಲ ನಾಗರಾಳ ಮಾತನಾಡಿ, ಅಜ್ಮೀರ ಷರೀಫ ದರ್ಗಾ ಕೇವಲ ಒಂದು ಪವಿತ್ರ ಸ್ಥಳವಲ್ಲ. ಅದು ಮನಸ್ಸಿನ ನೋವುಗಳಿಗೆ ಮೌನದ ಮದ್ದು. ಆತ್ಮಕ್ಕೆ ಶಾಂತಿಯ ಆಶ್ರಯ. ಕಲಬುರಗಿ ಸೂಫಿ ಸಂತ ಖಾಜಾ ಬಂದೇ ನವಾಜ್ ದರ್ಗಾ ಭಕ್ತಿ ಪರಂಪರೆಯಿಂದ ಕೂಡಿದೆ. ಚಿಂಚೋಳಿ ತಾಲೂಕವು ಸರ್ವ ಜನಾಂಗದ ಶಾಂತಿಯ ತೋಟ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲಿ ಸಮಾಜ ಸೇವಕ ಕೆ.ಎಂ. ಬಾರಿ,ಸೇಡಮ ಸರಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಡಾಣಬಿ.ಕೆ.ಪಂಡಿತ, ಬೆರಗು ಪ್ರಕಾಶನ ಸಂಚಾಲಕ ಡಾಣರಮೇಶ ಕತ್ತಿ,ಸಾಹಿತಿ ಬಸವರಾಜ ಐನೋಳಿ ಮಾತನಾಡಿದರು.

ಲೇಖಕ ಡಾ. ಮಿರಾಜಪಾಶಾ ಹಸನಅಲಿ ಅವರು ಬರೆದ ಅಜ್ಮೀರ ಆತ್ಮಯಾನಾ ಪ್ರವಾಸ ಕಥನ ಕುರಿತು ಮಾತನಾಡಿದರು.

ಪತ್ರಕರ್ತ ಜಗನ್ನಾಥ ಶೇರಿಕಾರ, ಕಸಾಪ ಅಧ್ಯಕ್ಷ ಸುರೇಶ ದೇಶಪಾಂಡೆ, ಅಬ್ದುಲ ಬಾಸೀತ, ಕಾಶಿಮಸಾಬ, ಮಕಬೂಲತಲಾಶಭಾಗವಹಿಸಿದ್ದರು. ಪ್ರಥಮದರ್ಜೆ ಕಾಲೇಜು ಪ್ರಾಂಶುಪಾಲ ಪ್ರೋ. ಬಸವರಾಜ ಕೋನೇರಿ. ಅಧ್ಯಕ್ಷತೆ ವಹಿಸಿ ಮಾತನಾಡಿದರು. ಆಂಗ್ಲ ಪ್ರಾಧ್ಯಾಪಕ ಸತೀಶಕುಮಾರ ದೊಡ್ಡಮನಿ ಸ್ವಾಗತಿಸಿದರು.

ಡಾ. ಬಸವರಾಜೇಶ್ವರಿ ಹಾಲು ನಿರೂಪಿಸಿದರು ಡಾ. ಉಮಾದೇವಿ ಪಾಟೀಲ ವಂದಿಸಿದರು. ಕಾರ್ಯಕ್ರಮದಲ್ಲಿ ಲೇಖಕ ಡಾ. ಮಿರಾಜಪಾಶ ಅವರಿಗೆ ವಿವಿಧ ಗಣ್ಯರು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು.

ಬೀದರಲ್ಲಿ ಶ್ರೀರಾಮ ನವಮಿ: ಬೃಹತ್ ಮೂರ್ತಿ ಮೆರವಣಿಗೆ

• **ಕನ್ನಡಪ್ರಭ ವಾರ್ತೆ** ಬೀದರ್

ನಗರದಲ್ಲಿ ಶ್ರೀರಾಮ ನವಮಿ ಅಂಗವಾಗಿ ಗುರುವಾರ ಸಂಜೆ ಬೃಹತ್ ಶ್ರೀರಾಮನ ಮೂರ್ತಿಯ ಭವ್ಯ ಮೆರವಣಿಗೆ ಜರುಗಿತು.

ನಗರದ ಕೆಇಬಿ ಬಳಿಯ ಹನುಮಾನ್ ಮಂದಿರದಿಂದ ಟ್ರಾಕ್ಟರ್‌ನಲ್ಲಿ ಶ್ರೀರಾಮ ಮೂರ್ತಿಯೊಂದಿಗೆ ನಗರದ ಮುಖ್ಯ ರಸ್ತೆಗಳಲ್ಲಿ ಶ್ರೀರಾಮನ ಜಯಘೋಷ ದೊಂದಿಗೆ ಭವ್ಯ ಮೆರವಣಿಗೆ ಜರುಗಿತು. ಮೆರವಣಿಗೆಯಲ್ಲಿ ವಿಶ್ವ ಹಿಂದೂ ಪರಿಷತ್ತಿನ ಕಲಬುರಗಿ ಪ್ರಮುಖರಾದ ರಾಮಕೃಷ್ಣ ಸಾಳೆ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮ ನಾಥ ಪಾಟೀಲ್ ಎನ್‌ಎಸ್‌ಎಸ್ ಕೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ವೀರಶೆಟ್ಟಿ ಖ್ಯಾಮಾ, ಮಾಜಿ ಬುಡಾ ಅಧ್ಯಕ್ಷ ಬಾಬು ವಾಲಿ, ಬಿಜೆಪಿ ನಗರ ಅಧ್ಯಕ್ಷ ಶಶಿಧರ ಹೋಸಳ್ಳಿ, ಬಾಬು ಮಲ್ಕಾಪೂರೆ, ಸಂತೋಷರೆಡ್ಡಿ, ಕಲ್ಪನಾ ದೇಶಪಾಂಡೆ, ದೀಪಕ ವಾಲಿ ಸೇರಿದಂತೆ ಇನ್ನಿತರ ಪ್ರಮುಖರು, ನೂರಾರು ಯುವಕರು ಪಾಲ್ಗೊಂಡಿದ್ದರು.

ಬೀದರಿನಲ್ಲಿ ಶ್ರೀರಾಮ ನವಮಿ ನಿಮಿತ್ತ ರಾಮನ ಮೂರ್ತಿಯ ಭವ್ಯ ಮೆರವಣಿಗೆ ಜರುಗಿತು.

ನಿರಗುಡಿಯಲ್ಲಿ ಸಿಡಿಲು ಬಡಿದು ಮಹಿಳೆ ಸಾವು, ಇಬ್ಬರು ಪಾರು

ಆಳಂದ: ತಾಲೂಕಿನ ನಿರಗುಡಿ ಗ್ರಾಮದಲ್ಲಿ ಗುರುವಾರ ಸಂಜೆ ವೇಳೆ ಗುಡುಗು ಸಹಿತ ಮಳೆ ಸಿಡಿಲು ಬಡಿದು ರೈತ ಮಹಿಳೆ ಸುನಂದ. ಭೀಮಾಶಂಕರ ಜಮಗೆ (42) ಮೃತಪಟ್ಟಿದ್ದಾರೆ. ಮೋಡ ಕವಿದ ವಾತಾವರಣದಿಂದಾಗಿ ಮಳೆ ಬರುತ್ತಿದೆ ಎಂದು ಕುಟುಂಬಸ್ಥರೊಂದಿಗೆ ದ್ವಿಚಕ್ರ ವಾಹನಕ್ಕೆ ಹೋಗಿ ಹೊಲದಲ್ಲಿನ

ಕಟಾವು ಮಾಡಿ ಒಟ್ಟಿದ ಗೋಧಿ ಬಣಮೆಗೆ ತಾಡಪತ್ರಿ ಮುಚ್ಚಿದ ಮೇಲೆ ಗಾಳಿಗೆ ತಾಡಪತ್ರಿ ಹಾರದಿರಲಿ ಎಂದು ಕಲ್ಲು ಹುಡುಕಿ ಇಟ್ಟು ಇನ್ನೇನು ಮನೆಗೆ ಹಿಂದಿರಗಬೇಕೆನ್ನುವಷ್ಟರಲ್ಲಿ ಅಪ್ಪಳಿಸಿದ ಸಿಡಿಲಿಗೆ ಮಹಿಳೆ ಬಲಿಯಾಗಿದ್ದಾಳೆ. ಹತ್ತಿರದಲ್ಲೇ ಇದ್ದ ಪತಿ ಭೀಮಾಶಂಕ ಹಾಗೂ ಪುತ್ರ ಸಿದ್ಧರಾಮ ಭೀಮಾಶಂಕರ ಜಮಗೆ ಪಾರಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಖಜೂರಿ, ನಿಂಬರಗಾ ಸೇರಿ ಹಲವಡೆ ಗುಡುಗು ಸಹಿತ ಮಳೆಯಿಂದಾಗಿ ತೋಟಗಾರಿಕೆ ಕಲ್ಲಂಗಡಿ, ದ್ರಾಕ್ಷಿ ಮಾವು ಪಪಾಯಿ ಇತರೆ ಬೆಳೆಗೆ ಹಾನಿಯಾಗಿದೆ. ರಾಶಿಗೆ ನಿಂತುಕೊಂಡಿದ್ದ ಜೋಳ, ಗೋಧಿ ಬೆಳೆ ಹಾನಿಯಾಗಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಏಪ್ರಿಲ್ ಮೊದಲ ವಾರದಲ್ಲೆ ಎಲ್ಲ ಕೆರೆಗಳ ಭರ್ತಿಗೆ ಕ್ರಮವಹಿಸಿ: ಡಿಸಿ

• **ಕನ್ನಡಪ್ರಭ ವಾರ್ತೆ** ರಾಯಚೂರು

ಮುಂಬರಲಿರುವ ಏಪ್ರಿಲ್ ಮೊದಲ ವಾರದಲ್ಲಿ ರಾಯಚೂರು ಜಿಲ್ಲೆಯ ಎಲ್ಲೆ ಕೆರೆಗಳನ್ನು ತುಂಬಿಸುವ ಕಾರ್ಯಕ್ಕೆ ಮೊದಲಾದ್ಯತೆ ನೀಡಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ನಿತೀಶ್ ಕೆ. ಹೇಳಿದರು.

ರಾಯಚೂರು ಜಿಲ್ಲೆಯಲ್ಲಿ ಮುಂಬರುವ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ, ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆಯಿಂದಾದ ಬೆಳೆಹಾನಿ ಹಾಗೂ ಮೇವು ಲಭ್ಯತೆ ಕುರಿತು, ಜಿಲ್ಲಾಧಿಕಾರಿ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಲ್ಲಿ ಸಿಂಧನೂರ ತಾಲೂಕಿನಲ್ಲಿ ಅತೀ ಹೆಚ್ಚು 155 ಕೆರೆಗಳಿದ್ದು, ಈ ಎಲ್ಲ ಕೆರೆಗಳನ್ನು ಮುಂದಿನ ತಿಂಗಳು ಜಾಗ್ರತೆಯಿಂದ ತುಂಬಿಸಬೇಕು. ಮಳೆಗಾಲದವರೆಗೆ ಮುಂದೆ ನೀರು ಸಿಗುವುದಿಲ್ಲ ಎಂದು ತಿಳಿಸಿದರು.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ್‌ಕಾಂದೂ ಮಾತನಾಡಿ, ಸಮಸ್ಯಾತ್ಮಕ ಹಳ್ಳಿಗಳಲ್ಲಿ ಖಾಸಗಿ ಬೋರವೆಲ್‌ಗಳನ್ನು ಗುರುತಿಸಿ ಕುಡಿಯುವ ನೀರು ಪೂರೈಕೆಗೆ ಅಗತ್ಯ ವ್ಯವಸ್ಥೆ ಮಾಡಬೇಕು. ರಾಯಚೂರು ಮತ್ತು ಸಿಂಧನೂರ ನಗರಸಭೆ ವ್ಯಾಪ್ತಿಯಲ್ಲಿ ಮತ್ತು ಜಿಲ್ಲಾ ವ್ಯಾಪ್ತಿಯ ಎಲ್ಲ ಹಳ್ಳಿಗಳಲ್ಲಿ ಪರೀಕ್ಷಿಸಿದ ಬಳಿಕವೇ ಕುಡಿಯುವ ನೀರು ಪೂರೈಸಬೇಕುಎಂದು ಅವರು ನಿರ್ದೇಶನ ನೀಡಿದರು. ದೇವದುರ್ಗ, ಸಿರವಾರ ಮತ್ತು ಮಾನ್ವಿಗಳಲ್ಲಿ ಟಾಸ್ಕ್‌ಫೋರ್ಸ್ ಸಭೆಗೆ ಕೂಡಲೇ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಎಡಿಸಿ,ಜಿಪಂ ಉಪಕಾರ್ಯದರ್ಶಿ, ನಾನಾ ತಾಲೂಕುಗಳ ತಹಸೀಲ್ದಾರ್, ತಾಪಂ ಸಿಇಒ, ಸ್ಥಳೀಯ ಸಂಸ್ಥೆಗಳ ಅಧಿಕಾರಿ, ಸಿಬ್ಬಂದಿ ಹಾಜರಿದ್ದರು.

ಕಾರಿನ ಹಿಂಭಾಗ ಗ್ಲಾಸ್ ಒಡೆದು ಲ್ಯಾಪ್‌ಟಾಪ್, ಮೊಬೈಲ್ ಕಳವು

ಕಲಬುರಗಿ: ನಗರದ ಆರ್ಚಿಡ್ ಮಾಲ್ ಹಿಂಭಾಗದ ರಸ್ತೆ ಬದಿಯಲ್ಲಿ ಪಾರ್ಕ್ ಮಾಡಿದ್ದ ಕಾರಿನ ಎಡಗಡೆ ಹಿಂಭಾಗದ ಗ್ಲಾಸ್ ಒಡೆದು ಕಳ್ಳರು ಕಾರಿನೊಳಗಡೆ ಇರಿಸಲಾಗಿದ್ದ 35 ಸಾವಿರ ರೂ.ಮೌಲ್ಯದದ ಹೆಚ್.ಪಿ.ಕಂಪನಿಯ ಎಲೈಟ್ ಬುಕ್ ಲ್ಯಾಪ್‌ಟಾಪ್, 21 ಸಾವಿರ ರೂ.ಮೌಲ್ಯದ ಮೊಟೋ ಎಡ್ಜ್ 14 ನ್ಯೂ ಮೊಬೈಲ್, 10 ಸಾವಿರ ರೂ.ಮೌಲ್ಯದ ಬೆಳ್ಳಿ ಗಣೇಶ ಮೂರ್ತಿ ಮತ್ತು 5 ಸಾವಿರ ರೂ.ಮೌಲ್ಯದ ಹಾಡ್ ರ್‌ಡಿಸ್ಕ್ ಮತ್ತು 2,500 ರೂ.ನಗದು ಕಳವು ಮಾಡಿದ್ದಾರೆ ಎಂದು ನಗರದ ಕಾಳೆಲೇಔಟ್ ನಿವಾಸಿ, ಸಿವಿಲ್ ಇಂಜಿನಿಯರ್ ಶಿವಸಾಗರ ಮಾನಕರ್‌ಅವರು ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಇವರು ನಗರದ ಆರ್ಚಿಡ್ ಮಾಲ್‌ನಲ್ಲಿರುವ ಐನಾಕ್ಸ್ ಸಿನೆಮಾ ಥಿಯೇಟರ್‌ನಲ್ಲಿ ದುರಂದರ್-2 ಸಿನೆಮಾ ನೋಡಲು ಗೆಳೆಯ ಶೇಖರ್‌ಪಡಶೆಟ್ಟಿ ಅವರಿಗೆ ಸೇರಿದ ಕಾರಿನಲ್ಲಿ ಹೋಗಿ, ಕಾರನ್ನು ಮಾಲ್ ಹಿಂಭಾಗದ ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದರು. ಈ ವೇಳೆ ಕಳ್ಳರು ಕಾರಿನ ಎಡಗಡೆ ಹಿಂಭಾಗದ ಗ್ಲಾಸ್ ಒಡೆದು ಲ್ಯಾಪ್‌ಟಾಪ್, ಮೊಬೈಲ್, ಬೆಳ್ಳಿ ಗಣೇಶ ಮೂರ್ತಿ, ಹಾರ್ಡ್ ಡಿಸ್ಕ್ ಮತ್ತು 2,500 ರೂ.ಕಳವು ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಕೇಂದ್ರೀಯ ರೈಲ್ವೆ
ಸೋಲಾಪುರ್ ವಿಭಾಗ
ಎಲ್‌ಸಿ ಗೇಟ್‌ಗಳಲ್ಲಿ ಪೀಠದ ಇಟಿಸಿಯನ್ನು ಬದಲಾಯಿಸುವುದು

ಟೆಂಡರ್ ಸೂಚನಾ ಸಂ. SUR-N-T--2025-26-48, ದಿನಾಂಕ: 24.03.2026. DRM(S&T)- ಕಛೇರಿ, ಕೇಂದ್ರೀಯ ರೈಲ್ವೆ, ಸೋಲಾಪುರ್ ಇವರು ಭಾರತದ ರಾಷ್ಟ್ರಪತಿಗಳ ಪರವಾಗಿ ಸಮರ್ಥ ಹೆಸರಾಂತ ಸಂಸ್ಥೆಗಳು/ಗುತ್ತಿಗೆದಾರರುಗಳಿಂದ ಆನ್‌ಲೈನ್ ಮೂಲಕ ಇ- ಟೆಂಡರ್‌ಗಳನ್ನು ರೈಲ್ವೆ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.ireps.gov.in ಮೂಲಕ ಕೆಳಕಂಡ ಕೆಲಸಗಳಿಗೆ ಆಹ್ವಾನಿಸಿದ್ದಾರೆ. ಕೆಲಸದ ಹೆಸರು ಜೊತೆಗೆ ಸ್ಥಳ: ಕೇಂದ್ರೀಯ ರೈಲ್ವೆ ಸೋಲಾಪುರ ವಿಭಾಗದಲ್ಲಿ ಎಲ್‌ಸಿ ಗೇಟ್‌ಗಳಲ್ಲಿ ಹಳೆಯದಾದ ಗೇಟ್ ಪೀಠ ಮತ್ತು ಸಂಬಂಧಿತ ಮೌಲ್ಯ ಮಾಪನ ಕೇಂದ್ರಗಳನ್ನು ಬದಲಾಯಿಸುವುದು. ಟೆಂಡರ್ ಸಂ. SUR-N-T- 2025-26-48 ಕೆಲಸದ ಅಂದಾಜು ಮೊತ್ತ ₹1,59,35,211.54. ಟೆಂಡರ್ ಫಾರಂ ಬೆಲೆ: ನಿಲ್, ಅರ್ನೆಸ್ಟ್ ಮನಿ ಡಿಪಾಸಿಟ್: ರೂ. ₹2,29,700/-. ಕೆಲಸ ಮುಕ್ತಾಯದ ಅವಧಿ: 12 ತಿಂಗಳುಗಳು. ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ: 20.04.2026 15:30 ಗಂಟೆ ನಂತರ. ವಿವರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಯಾವುದೇ ತಿದ್ದುಪಡಿ/ ಬದಲಾವಣೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುತ್ತದೆ. ಆನ್‌ಲೈನ್ ಟೆಂಡರ್‌ಗಳನ್ನು ಮಾತ್ರ ಸ್ವೀಕರಿಸಲಾಗುವುದು. ಕೈಬರಹ/ಅಂಚೆ/ ಇ-ಮೇಲ್, ಫ್ಯಾಕ್ಸ್ ಬರಹದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಬಿಡ್ಡರ್‌ಗಳು ಕಂಪನಿಯ ಹೆಸರಿನೊಂದಿಗೆ ವರ್ಗ III ಡಿಜಿಟಲ್ ಸಹಿ ಪ್ರಮಾಣ ಪತ್ರ ಪಡೆದುಕೊಳ್ಳಲು ಮತ್ತು ಅದನ್ನು www.ireps.gov.in ನಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಅರ್ನೆಸ್ಟ್ ಮನಿ (ಇಎಂಡಿ) ನೆಟ್ ಬ್ಯಾಂಕಿಂಗ್ ಅಥವಾ ಪೇಮೆಂಟ್ ಗೇಟ್‌ವೇ ಮೂಲಕ ಅಥವಾ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಸ್ವೀಕರಿಸಲಾಗುತ್ತದೆ. ಮತ್ತು ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕಕ್ಕೆ ಮೊದಲು ಟೆಂಡರ್ ದಾಖಲೆಯಲ್ಲಿ ಸೂಚಿಸಿದಂತೆ ಮೂಲ ಬ್ಯಾಂಕ್ ಗ್ಯಾರಂಟಿಯನ್ನು ಅಧಿಕೃತ ನಾಮನಿರ್ದೇಶಕರಿಗೆ ವೈಯಕ್ತಿಕವಾಗಿ ತಲುಪಿಸಬೇಕು. (ಅಂದರೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಹೊರತುಪಡಿಸಿ) ಇತರೆ ವಿವರಗಳಿಗಾಗಿ ದಯವಿಟ್ಟು www.ireps.gov.in ಗೆ ಭೇಟಿ ನೀಡಿ.

ರೈಲು ಮಾರ್ಗದ ಬಳಿ ಅಭದ್ರತೆ ಮತ್ತು ಅನಧಿಕೃತ ಕೆಲಸ ಶಿಕ್ಷಾರ್ಹ ಅಪರಾಧ

ಪತ್ರಿಕಾ ಪ್ರಕಟಣೆ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿತ್ತಾಪೂರ
ಅಪರಾದ ಸಂಕೀರ್ಣ ಸಂಖ್ಯೆ : 74/2026

1. ಗೋಪಿ ತಂದೆ ಚಂದರ ರಾಠೋಡ, ವಯಸ್ಸು : 41 ವರ್ಷ, ಉದ್ಯೋಗ : ಕೂಲಿ, ಸಾ|| ಶಾಂಪೂರ ಹಳ್ಳಿ ಗ್ರಾಮ, ತಾ: ಚಿತ್ತಾಪೂರ, ಜಿ: ಕಲಬುರಗಿ ...ಅರ್ಜಿದಾರರು

ವಿರುದ್ಧ

1) ಜನನ ಮತ್ತು ಮರಣ ನೊಂದಣಾಧಿಕಾರಿಗಳು ಹಾಗೂ ತಹಸೀಲ್ ಕಾರ್ಯಾಲಯ, ಚಿತ್ತಾಪೂರ, ತಾ. ಚಿತ್ತಾಪೂರ, ಜಿ. ಕಲಬುರಗಿ.
2) All Concerned ...ಎದುರುದಾರರು

ಜನನ ಮತ್ತು ಮರಣ ನೊಂದಣಿ ಅಧಿನಿಯಮ, 1969 ಕಲಂ 13 (3)ರಡಿಯಲ್ಲಿ ಅರ್ಜಿದಾರರ ಪರ ಅರ್ಜಿ

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರನ ತಾಯಿಯಾದ ದಿ. ತಾರಿಬಾಯಿ ಗಂಡ ಚಂದರ, ಇವರು ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಶಾಂಪೂರ ಹಳ್ಳಿ ಗ್ರಾಮದಲ್ಲಿ, ದಿನಾಂಕ : 05/01/2025ರಂದು ತಮ್ಮ ಸ್ವಂತ ನಿವಾಸದಲ್ಲಿ ಮರಣ ಹೊಂದಿರುತ್ತಾಳೆ. ಮರಣ ಪ್ರಮಾಣ ಪತ್ರ ನೀಡಿಕೆಯ ಕೋರಿ, ಪ್ರತಿವಾದಿಗೆ ನಿರ್ದೇಶನ ನೀಡುವಂತೆ ಅರ್ಜಿದಾರರು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟವರು ಸದರಿ ಅರ್ಜಿಯನ್ನು ಮಾನ್ಯ ಮಾಡಲು ಏನಾದರೂ ತಕರಾರು ಇದ್ದರೆ ಅವರು ದಿನಾಂಕ : 30/04/2026ರಂದು ಬೆಳಿಗ್ಗೆ 11.00 ಗಂಟೆಗೆ ಖುದ್ದಾಗಿ ಅಥವಾ ನ್ಯಾಯವಾದಿಗಳ ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ. ಸದರಿ ದಿನದಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದಿದ್ದಲ್ಲಿ ಸದರಿ ಅರ್ಜಿಗೆ ತಮ್ಮ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಿ ಮುಂದಿನ ಆದೇಶ ಹೊರಡಿಸಲಾಗುತ್ತದೆ.

2026 ವರ್ಷದ ಮಾರ್ಚ್ ತಿಂಗಳ 26ನೇಯ ದಿನಾಂಕದಂದು ನನ್ನ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸ್ಥಳ : ಚಿತ್ತಾಪೂರ

ನ್ಯಾಯಾಲಯದ ಆದೇಶ ಪ್ರಕಾರ
ಸಹಿ/- ಮುಖ್ಯ ಲಿಪಿಕಾಧಿಕಾರಿ
ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ.
ಇವರ ಮುಖಾಂತರ
ಸಹಿ/- ಶ್ರೀ ಗಂಗಾಧರ ಸಾಲಿಮಠ
ನ್ಯಾಯವಾದಿಗಳು, ಚಿತ್ತಾಪೂರ

ಸಾರ್ವಜನಿಕ ಸೂಚನೆ

ನನ್ನ ಅರ್ಜಿದಾರರಾದ **ಡಾ|| ಶರಣಗೌಡ ಪಾಟೀಲ್ ತಂದೆ ಹಣಮಂತರಾಯ ಪಾಟೀಲ್** ಅವರು ಸದರಿ ವಾಸುದೇವರಾವ ತಂದೆ ಸಂಗಯ್ಯ ಜಾಜಿ ಇವರ ಹೆಸರಿನ ಮೇಲೆ ಇರುವಂತಹ **ಪ್ಲಾಟ ನಂ. 14, ಸಿ.ಟಿ.ಎಸ್. ನಂ. 2611, ಶೀಟ್ ನಂ. 74, ಬ್ಲಾಕ ನಂ. VII, ಸರ್ವೆ ನಂ. 40, 41 & 43, ಒಟ್ಟು ವಿಸ್ತೀರ್ಣ: 325.1605 ಸ್ಕಾ.ಮೀಟರ್ಸ್, ಗ್ರಾಮ: ಬ್ರಹ್ಮಪೂರ, ತಾ|| ಜಿ|| ಕಲಬುರಗಿ** ವುಳ್ಳ ಆಸ್ತಿಯನ್ನು ಖರೀದಿ ಮಾಡಿಕೊಂಡಿರುತ್ತಾರೆ, ಈ ಆಸ್ತಿಯು ಮೊದಲಿನ ಮಾಲೀಕರಾದ **ಯಮುನಾಬಾಯಿ ತಂದೆ ದಾದಾಸಾಹೇಬ ದೇಶಪಾಂಡೆ** ಇವರಿಂದ ಆದಂತಹ **ನೋಂದಣಿ ಸಂಖ್ಯೆ: 629/1967–68,** ದಿನಾಂಕ: 09–06–1967, ರಂದು ನೋಂದಣಿಯಾಗಿರುವಂತಹ ಮೂಲ ದಾಖಲಾತಿಗಳನ್ನು, **ವಾಸುದೇವರಾವ ತಂದೆ ಸಂಗಯ್ಯ ಜಾಜಿ** ಅವರು ಕಳೆದುಕೊಂಡಿದ್ದಾರೆ ಎಂದು ಈ ಸಾರ್ವಜನಿಕ ಸೂಚನೆಯನ್ನು ನೀಡಲಾಗಿದೆ. ಸದ್ಯ ಸದರಿ ಆಸ್ತಿಯ ಮೇಲೆ ನನ್ನ ಅರ್ಜಿದಾರರಾದ **ಡಾ|| ಶರಣಗೌಡ ಪಾಟೀಲ್ ತಂದೆ ಹಣಮಂತರಾಯ ಪಾಟೀಲ್** ಎಲ್.ಐ.ಸಿ.ಹೆಚ್.ಎಫ್.ಎಲ್. ನ ವತಿಯಿಂದ ಸಾಲವನ್ನು ಪಡೆದುಕೊಳ್ಳುತ್ತಿದ್ದಾರೆ. ಸದರಿ ಆಸ್ತಿಯ ಚರ್ತುಸೀಮೆ ಈ ಕೆಳಗಿನಂತಿರುತ್ತದೆ.

ಪೂವಕ್ಕೆ: 30' ಫೀಟ್ ರಸ್ತೆ, **ಪಶ್ಚಿಮಕ್ಕೆ:** ಖಾಸಗಿ ರಸ್ತೆ, **ಉತ್ತರಕ್ಕೆ:** ಪ್ಲಾಟ ನಂ. 15, **ದಕ್ಷಿಣಕ್ಕೆ:** ಪ್ಲಾಟ ನಂ. 13.

ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ತಂಟೆ/ತಕರಾರುಗಳು ಇದ್ದಲ್ಲಿ 15 ದಿನಗಳ ಒಳಗಾಗಿ ಕೆಳಗೆ ತಿಳಿಸಿದ ವಕೀಲರಿಗೆ ತಮ್ಮ ದಾಖಲೆಗಳನ್ನು ಹಾಜರುಪಡಿಸಬೇಕು ಇಲ್ಲದಿದ್ದರೆ ಎಲ್.ಐ.ಸಿ. ಈ ಆಸ್ತಿಯ ಮೇಲೆ ಸಾಲ ನೀಡುತ್ತೇವೆ. ಆದ್ದರಿಂದ ಸಾರ್ವಜನಿಕ ಸೂಚನೆ ನೀಡಲಾಗಿದೆ.

ದಿನಾಂಕ: 11–03–2026

ಸಹಿ/– **ಜಿ.ಎನ್. ಪಾಟೀಲ್,**
ನ್ಯಾಯವಾದಿಗಳು.
ಕಛೇರಿ ವಿಳಾಸ: ಎಲ್.ಐ.ಜಿ–17, ಕೆ.ಹೆಚ್.ಬಿ. ಕಾಲೋನಿ, ನ್ಯಾಯಾಲಯದ ಹಿಂದುಗಡೆ, ಕಲಬುರಗಿ.
ಮೊ.ನಂ. 9845776693

ಸ್ವಾಧೀನ ಸೂಚನೆ

ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ, 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಕಲಂ 13(2)ರ ಜೊತೆಗೆ ಓದಿಕೊಳ್ಳಬೇಕಾದ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 3ರಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಕಂಡ ಸಾಲಗಾರ(ರು)/ಸಹ-ಸಾಲಗಾರ(ರು)ಗಳಿಗೆ ಡಿಮಾಂಡ್ ನೋಟೀಸ್‌ಗಳನ್ನು ಜಾರಿಮಾಡಿ ಅವರ ಹೆಸರುಗಳಿಗೆ ಎದುರಾಗಿ ಕೆಳಕಂಡಂತೆ ನಮೂದಿಸಲಾದ ಅಸಲು + ಅನ್ವಯಿಸುವ ದರದಂತೆ ಬಡ್ಡಿ ಸೇರಿದ ಬಾಕಿ ಮೊಬಲಗನ್ನು ಸದರಿ ನೋಟೀಸು ಸ್ವೀಕರಿಸಿದ ದಿನಾಂಕದಿಂದ ಜೊತೆಗೆ ಪಾವತಿಯಾಗುವ ದಿನಾಂಕದವರೆಗೆ ಮತ್ತು/ಅಥವಾ ಪೂರ್ತಿ ತೀರುವ ದಿನಾಂಕದವರೆಗೆ ತದನಂತರದ ಬಡ್ಡಿ, ಸಾಂದರ್ಭಿಕ ವೆಚ್ಚಗಳು, ಕಾಸ್ಟ್‌ಗಳು ಚಾರ್ಜು ಇತ್ಯಾದಿಗಳು ಸೇರಿದ ಮೊತ್ತವನ್ನು 60 ದಿನದೊಳಗೆ ಪಾವತಿ ಮಾಡಲು ಒತ್ತಾಯಿಸಿದ್ದರು.

ಕ್ರ. ಸಂ	ಸಾಲದ ಸಂಖ್ಯೆ	ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ ಅಡಮಾನದಾರ	13(2)ರ ನೋಟೀಸ್ ದಿನಾಂಕ/ ಬಾಕಿ ಮೊತ್ತ (ರೂ.) ದಿನಾಂಕದಂದು ಇದ್ದಂತೆ	ಸ್ವಾಧೀನದ ದಿನಾಂಕ/ಸಮಯ ಮತ್ತು ವಿಧ
1	31769430000661	1) ಶ್ರೀ ಮನೋಜ್ ಕುಮಾರ್, 2) ಶ್ರೀ ವಿಜಯ್ ಕುಮಾರ್	14-01-2025, ರೂ.4,30,716.50 (ನಾಲ್ಕು ಲಕ್ಷದ ಮೂವತ್ತು ಸಾವಿರದ ಏಳುನೂರ ಹದಿನಾರು ರೂ ಮತ್ತು ಐವತ್ತು ಪೈಸೆ ಮಾತ್ರ) ಬಾಕಿ 09-01-2026 ರಂದು ಇದ್ದಂತೆ	Date: 25-03-2026 Time: 04:55 PM ಸಾಂಕೇತಿಕ ಸ್ವಾಧೀನತೆ

ಆಸ್ತಿಯ ವಿವರಣೆ: ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ಮಾಲೀಕತ್ವ ಮತ್ತು ಸ್ವಾಧೀನತೆ ಹೊಂದಿರುವ ವಸತಿ ಜಿಪಿ ಸಂಖ್ಯೆ.1/126 ಇ-ಸ್ವತ್ತಿನ ಸಂ.150600401700422977 ಪೂರ್ವ-ಪಶ್ಚಿಮ: 14.6304 ಮೀ.ಗಳು, ಉತ್ತರ-ದಕ್ಷಿಣ 7 .49809 ಮೀ.ಗಳು ಒಟ್ಟು ಅಳತೆ; 109.70 ಚದರ ಮೀ.ಗಳು ಗ್ರಾಮ ಚಿಕ್ಕಪೇಟೆ, ಗ್ರಾಮ ಪಂಚಾಯತ್ ಮಾರ್ಕಲ್‌ರಾಲ್, ಬೀದರ್ ತಾಲ್ಲೂಕು ಮತ್ತು ಜಿಲ್ಲೆ ಬೀದರ್. ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ:ಇತರರ ಭೂಮಿ, ಉತ್ತರಕ್ಕೆ: ಶಂಕರ್‌ರವರ ಮನೆ, ದಕ್ಷಿಣಕ್ಕೆ: ದೌಲಪ್ಪರವರ ಮನೆ.

ಆದಾಗ್ಯೂ ಮೇಲೆ ತಿಳಿಸಿದ ಸಾಲಗಾರ(ರು) /ಸಹ-ಸಾಲಗಾರ(ರು) /ಜಾಮೀನುದಾರ(ರು)/ಅಡಮಾನದಾರ (ರು) ಬಾಕಿ ಮೊತ್ತವನ್ನು ಪಾವತಿ ಮಾಡುವಲ್ಲಿ ವಿಫಲರಾಗಿದ್ದು, ಈ ಮೂಲಕ ಮೇಲೆ ತಿಳಿಸಿದ ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ತಿಳಿಯಪಡಿಸುವುದೇನೆಂದರೇ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸದರಿ ಕಾಯಿದೆಯ ಕಲಂ 13(4) ಮತ್ತು ಜೊತೆಗೆ ಓದಿಕೊಳ್ಳಬೇಕಾದ ನಿಯಮಗಳ ನಿಯಮ 8ರಂತೆ ಪ್ರದತ್ತವಾದ ಅಧಿಕಾರಗಳಂತೆ ಮೇಲೆ ತಿಳಿಸಿದ ಆಸ್ತಿಯನ್ನು / ಭದ್ರತಾ ಸ್ವತ್ತುಗಳನ್ನು ಮೇಲೆ ತಿಳಿಸಿದ ದಿನಾಂಕದಂದು ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ. ಮೇಲೆ ತಿಳಿಸಿದ ಸಾಲಗಾರ(ರು)/ ಸಹ-ಸಾಲಗಾರರು/ ಜಾಮೀನುದಾರರು/ ಅಡಮಾನದಾರರಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕರಿಗೆ ವಿಸ್ತಾರವಾಗಿ ನೀಡುವ ಎಚ್ಚರಿಕೆಯೇನೆಂದರೇ, ಮೇಲೆ ತಿಳಿಸಿದ ಆಸ್ತಿಗಳ/ ಭದ್ರತಾ ಸ್ವತ್ತುಗಳ ಬಗ್ಗೆ ಯಾರೂ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು, ಆದಾಗ್ಯೂ ವ್ಯವಹರಿಸಿದ್ದೇ ಆದರೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಬಾಕಿಯಾಗಿರುವ ಮೊತ್ತಕ್ಕೆ ಬಾಧ್ಯರಾಗಬೇಕಾಗುತ್ತದೆ.

ಸ್ಥಳ : ಬೀದರ್	ಸಹಿ/- ಅಧಿಕೃತ ಅಧಿಕಾರಿ
ದಿನಾಂಕ : 26.03.2026	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

AMBIT Finvest Pragati ke partner
AMBIT FINVEST PRIVATE LIMITED
ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್

ಕಾರ್ಪೋರೇಟ್ ಕಛೇರಿ: ಕನಾಕಿಯಾ ವಾಲ್ ಸ್ಟ್ರೀಟ್, 5ನೇ ಮಹಡಿ, ಎ 506-510, ಅಂಧೇರಿ- ಕುರ್ಲಾ ರಸ್ತೆ, ಅಂಧೇರಿ ಪೂರ್ವ, ಮುಂಬೈ- 400093.

ಡಿಮಾಂಡ್ ನೋಟೀಸ್ (2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ (''ಕಾಯಿದೆ'') ಮತ್ತು 2002ರ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳ (''ನಿಯಮಗಳು'') ಇವುಗಳ ಕಟ್ಟಳೆಗಳಡಿ.

ಆದಾಗ್ಯೂ ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು 2002ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆಯಡಿ ಮತ್ತು 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆ ಕಲಂ 13(12)ರಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುತ್ತಾ ಕಾಯಿದೆಯ ಕಲಂ 13(2)ರಡಿ ಕೆಳಕಂಡ ಸಾಲಗಾರ(ರ)ಗೆ ಕರೆ ನೀಡಿ, ಸೂಚನೆಗಳನ್ನು ಜಾರಿ ಮಾಡಿ ಕೆಳಕಂಡಂತೆ ತಿಳಿಯಪಡಿಸಿರುವ ಬಾಕಿ ಸಾಲದ ಮೊತ್ತದ ಜೊತೆಗೆ ಸಂಬಂಧಿಸಿದ ಸೂಚನೆಗಳಲ್ಲಿ ನಮೂದಿಸಲಾದ ತದನಂತರದ ಬಡ್ಡಿಯು ಸೇರಿದ ಬಾಬ್ತನ್ನು ಸದರಿ ಸೂಚನೆಗಳ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿ ಮಾಡಲು ಸೂಚಿಸಿದ್ದರು. ಕೆಳಸಹಿದಾರರು ಸಾಲಗಾರರು ಡಿಮಾಂಡ್ ನೋಟೀಸ್‌ಗಳನ್ನು ನೀಡಿದರೂ ಬೇಕಂತಲೇ ತಪ್ಪಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಬಲವಾಗಿ ತಿಳಿದುಕೊಂಡಿರುತ್ತಾರೆ. ಆದುದರಿಂದ ಈ ಮೂಲಕ ನೋಟೀಸ್ ಜಾರಿಗೊಳಿಸಿ ನಿಯಮಯಮಗಳಂತೆ ಅಂಟಿಸಲಾಗಿದೆ ಮತ್ತು ಡಿಮಾಂಡ್ ನೋಟೀಸ್(ಗಳ) ಸಾರಾಂಶ ಪ್ರಕಟಿಸಲಾಗಿದೆ ಈ ಕೆಳಗಿನಂತಿದೆ

ಸಾಲಗಾರ(ರ) ಹೆಸರು	ಡಿಮಾಂಡ್ ನೋಟೀಸ್ ದಿನಾಂಕ ಮೊತ್ತ
1. ಫಿರೋಜುದ್ದೀನ್ ಅಹ್ಮದ್ ಫರೀದುದ್ದೀನ್ ಎಹೆಚ್‌ಎಂ 2. ಫಾತೀಮಾ ಬೇಗಂ ಮೊಹದ್ ಅಬ್ದುಲ್ ರಾಜ್ Lan Nos. BDR000001012502	10.03.2026. ರೂ. 25,93,573/- (ಇಪ್ಪತ್ತೈದು ಲಕ್ಷದ ತೊಂಭತ್ತಮೂರು ಸಾವಿರದ ಐದುನೂರ ಎಪ್ಪತ್ತಮೂರು ರೂ. ಗಳು ಮಾತ್ರ) 07.03.2026 ರಂದು ಇದ್ದಂತೆ

ಸ್ಥಿರಾಸ್ತಿಯ ವಿವರ/ ಅಡಮಾನಿತ ಆಸ್ತಿ

ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿಯ ವಸತಿ ಮನೆಯ ಸಿಎಂಸಿ ಸಂ. 18-4-38/39, (ತೆರೆದ ಪ್ಲಾಟ್‌ಗಳು ಸಂ. 38 ಮತ್ತು 39ರಲ್ಲಿ ನಿರ್ಮಿಸಲಾಗಿದೆ), ಒಟ್ಟಾರೆ ಒಳಗೊಂಡಿರುವ ಪ್ರದೇಶ 1370 ಚದರ ಅಡಿಭೂಮಿಯ ಸ್ಥಳದ ಸರ್ವೆ ಸಂ. 123/1/ಎ, ಹೆಚ್‌ಎಕ್ಯೂ ಕಾಲೋನಿ, ಚಿದ್ರಿ, ಜಿಲ್ಲೆ: ಬೀದರ್-585403. ಚಕ್ಕುಬಂದಿ ಕೆಳಗಿನಂತಿದೆ: ಪೂರ್ವಕ್ಕೆ: 20' ಅಗಲ ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ಸಂ. 40, ಉತ್ತರಕ್ಕೆ: ಇತರರ ಭೂಮಿ, ದಕ್ಷಿಣಕ್ಕೆ: ಪ್ಲಾಟ್ ಸಂ. 37.

ಸಾಲಗಾರ(ರು)ಗಳಿಗೆ ಸಲಹೆ ಮಾಡುವುದೇನೆಂದರೆ ಡಿಮಾಂಡ್ ನೋಟೀಸ್‌ನಂತೆ ತಾವು ನಡೆದುಕೊಳ್ಳಬೇಕು ಮತ್ತು ಡಿಮಾಂಡ್ ಮಾಡಿರುವ ಬಾಕಿ ಮೊತ್ತವನ್ನು ಪೂರ್ತಿ ಪಾವತಿಯಾಗುವ ದಿನಾಂಕದವರೆಗೂ ಅನ್ವಯಿಸುವ ಬಡ್ಡಿ, ಹೆಚ್ಚುವರಿ ಬಡ್ಡಿ, ಚಾಟ್ಸ್ ಚಾರ್ಜ್‌ಗಳು ಕಾಸ್ಟ್ ಮತ್ತು ವೆಚ್ಚಗಳ ಸೇರಿದ ಮೊತ್ತವನ್ನು ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿ ಮಾಡಬೇಕು. ಸಾಲಗಾರರು ತಿಳಿದುಕೊಳ್ಳಬೇಕಾದ ಸೂಚನೆಯೇನೆಂದರೆ, ಎಎಫ್‌ಪಿಎಲ್ ಸೆಕ್ಯೂರ್ಡ್ ಕ್ರೆಡಿಟರ್ ಆಗಿದ್ದು, ಸಾಲಗಾರನು(ರು) ಪಡೆದುಕೊಂಡಿರುವ ಸಾಲವು ಭದ್ರತಾ ಸಾಲವಾಗಿದ್ದು, ಸಾಲಕ್ಕಾಗಿ ಸಾಲಗಾರನು(ರು) ಭದ್ರತಾ ಆಸ್ತಿಯ(ಗಳ)ನ್ನು ಅಡಮಾನ ಮಾಡಿರುತ್ತಾರೆ. ಸಾಲಗಾರನು(ರು) ನಿಗದಿತ ಅವಧಿಯೊಳಗಾಗಿ ಅವರು ಪಡೆದುಕೊಂಡಿರುವ ಹೊಣೆಗಾರಿಕೆ (ಸಾಲ)ಯನ್ನು ಪೂರ್ತಿಯಾಗಿ ಪಾವತಿ ಮಾಡಲು ವಿಫಲರಾದಲ್ಲಿ ಎಎಫ್‌ಪಿಎಲ್‌ಕಾಯಿದೆಯ ಕಲಂ 13(4) ರಡಿ ಭದ್ರತಾ ಆಸ್ತಿ(ಗಳ)ನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಮಾರಾಟ ಅಥವಾ ಕಾಯಿದೆಯಡಿ ಲಭ್ಯವಾಗುವ ಇನ್ನಾವುದೇ ಪರಿಹಾರಗಳಂತೆ ಕ್ರಮ ಕೈಗೊಳ್ಳಲು ಮಾತ್ರ ಮಿತಿಗೊಳ್ಳದೇ ಅಧಿಕಾರ ಚಲಾಯಿಸಲು ಬ್ಯಾಂಕ್‌ಗೆ ಅಧಿಕಾರವಿರುತ್ತದೆ. ತದನಂತರ ಎಎಫ್‌ಪಿಎಲ್ ಭದ್ರತಾ ಆಸ್ತಿಯನ್ನು ಮಾರಾಟ ಮಾಡಿ ಬಾಕಿ ವಸೂಲು ಮಾಡಿಕೊಳ್ಳಬಹುದು ಹಾಗೂ ಅಥವಾ ವರ್ಗಾವಣೆ ಮಾಡುವ ಮುಂಚೆ ಎಎಫ್‌ಪಿಎಲ್ ಭದ್ರತಾ ಆಸ್ತಿಯನ್ನು(ಗಳನ್ನು) ಅಟಾಚ್ ಮತ್ತು /ಅಥವಾ ಸೀಲ್ ಮಾಡಬಹುದಾಗಿದೆ. ಎಎಫ್‌ಪಿಎಲ್‌ಗೆ ಸಾಲ ಬಾಕಿ ವಸೂಲಾತಿಗಾಗಿ ಅಂದರೆ ಅಡಮಾನಿತ ಆಸ್ತಿ ಮಾರಾಟ ಮಾಡಿದ ನಂತರ ಬರುವ ಹುಟ್ಟುವಳಿ ಸಾಲದ ಬಾಕಿಗೆ ಸರಿಹೊಂದದಿದ್ದ ಪಕ್ಷದಲ್ಲಿ ಕಾನೂನು ಕ್ರಮ ಕೈಗೊಳ್ಳಲು ಹಕ್ಕು ಹೊಂದಿರುತ್ತದೆ. ಈ ಪರಿಹಾರ ಮಾರ್ಗವು ಎಎಫ್‌ಪಿಎಲ್‌ಗೆ ಇತರೆ ಕಾನೂನು ಲಭ್ಯವಾದ ಇತರೆ ಪರಿಹಾರಗಳ ಕಾನೂನು ಕ್ರಮಗಳ ಜೊತೆಗೆ ಹೆಚ್ಚುವರಿ ಮತ್ತು ಸ್ವತಂತ್ರದ್ದಾಗಿರುತ್ತದೆ. ಕಾಯಿದೆಯ ಕಲಂ 13(8)ರ ಬಗ್ಗೆ ಸಾಲಗಾರ(ರು) ಗಮನವನ್ನು ಸೆಳೆಯಲಾಗಿದೆ. ಇದು ಸಾಲಗಾರ(ರು) ಭದ್ರತಾ ಆಸ್ತಿ(ಗಳ)ನ್ನು ಬಿಡಿಸಿಕೊಳ್ಳಲಿರುವ ಕಾಲಾವಕಾಶದ ಬಗ್ಗೆ ತಿಳಿಸುತ್ತದೆ ಮತ್ತು ಕಲಂ 13(13) ರಲ್ಲಿರುವಂತೆ ಮೇಲಿನ ಕಟ್ಟಲೆಗಳನ್ನು ಪಾಲಿಸಬೇಕು. ಅದರಂತೆ ಸಾಲಗಾರ(ರು) ಭದ್ರತಾ ಆಸ್ತಿಗಳ ಅಥವಾ ಮಾರಾಟ, ಲೀಸ್ ಅಥವಾ ಬೇರೆ ರೀತಿಯಲ್ಲಿ (ಸಾಮಾನ್ಯ ವ್ಯವಹಾರದ ಹೊರತಾಗಿ) ಯಾವುದೇ ಭದ್ರತಾ ಆಸ್ತಿ(ಗಳನ್ನು) ವರ್ಗಾವಣೆ ಮಾಡುವುದನ್ನು ನಿರ್ಬಂಧಿಸಲಾಗಿದೆ/ನಿಷೇಧಿಸಲಾಗಿದೆ. ಎಎಫ್‌ಪಿಎಲ್ ನ ಪೂರ್ವ ಲಿಖಿತ ಒಪ್ಪಿಗೆಯಿಲ್ಲದೆ ಕಾನೂನುನನ್ನು ಅನುಸರಿಸದಿರುವುದು ಸದರಿ ಕಾಯಿದೆಯ ಸರ್ಫೇಸಿ ಕಾಯಿದೆ ಕಲಂ 29ರಡಿ ಶಿಕ್ಷಾರ್ಹ ಅಪರಾಧವಾಗುತ್ತದೆ. ಡಿಮಾಂಡ್ ನೋಟೀಸ್‌ನ ಪ್ರತಿ ಕೆಳಸಹಿದಾರರೊಂದಿಗೆ ಲಭ್ಯವಿರುತ್ತದೆ ನೀವು ಅಪೇಕ್ಷಪಟ್ಟಲ್ಲಿ ನೀವು ಕೆಳಸಹಿದಾರರಿಂದ ಯಾವುದೇ ಕೆಲಸದ ದಿನದ ಕಛೇರಿಯ ಮಾಮೂಲು ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ದಿನಾಂಕ: 27.03.2026, ಸ್ಥಳ: ಬೀದರ್, ಕರ್ನಾಟಕ

ಸಹಿ/- ಅಂಕೇತ್ ಮೋರೆ, ಅಧಿಕೃತ ಅಧಿಕಾರಿ,
ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್

MANAPPURAM FINANCE LTD.
CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/04/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ') ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ರಾಯಚೂರು, ದೇವದುರ್ಗಾ, 0122280700057674, ವೀರೇಶ್, 31800/–, ಡ್ರಾಪ್ಸ್ & ಸ್ಟಡ್ 1, 7722, ದೀಪಿಕ, 18000/–, ಸ್ಟಡ್ 1, 0122280730021002, ಮಂಜುನಾಥ, 34029/–, ಉ-ಡ್ರಾಪ್ಸ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:– ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್‌ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ,ಬೆಂಗಳೂರು-560071.

2002ರ ಸರ್ಫೇಸಿ ಕಾಯಿದೆಯ ಕಲಂ 13(2)ರಡಿ ಡಿಮಾಂಡ್ ನೋಟಿಸ್

ಆದಾಗ್ಯೂ ಕೆಳಕಂಡಂತೆ ತಿಳಿಸಲಾದ ಸಾಲಗಾರರು, ಸಹ-ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರು ಆದ ನೀವು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನಿಂದ, ನಿಮ್ಮಗಳ ಸ್ಥಿರ ಆಸ್ತಿಗಳನ್ನು ಅಡಮಾನ ಮಾಡಿ ಸಾಲಗಳನ್ನು ಪಡೆದಿರುತ್ತೀರಿ. ನೀವೆಲ್ಲಾ ಸಾಲ ತೀರಿಸದೇ ವಿಫಲರಾಗಿ ಸುಸ್ತಿಯಾದುದರಿಂದ ನಿಮ್ಮ ಸಾಲದ ಖಾತೆಯನ್ನು ನಿಷ್ಕ್ರಿಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ, ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಭದ್ರತಾ ಸಾಲಿಗರಾಗಿ, ಕಾಯಿದೆಯಡಿ ಮತ್ತು ಸದರಿ ಕಾಯಿದೆಯ ಕಲಂ 13(2) ಮತ್ತು 2002ರ ಭದ್ರತಾ ಹಿತಾಸಕ್ತಿ ನಿಯಮಗಳ ನಿಯಮ 2ರ ಜೊತೆಗೆ ಓದಿಗಿಂಡ ಅಧಿಕಾರಗಳಂತೆ, ಕೆಳಕಂಡಂತಿರುವ ವಿವರಗಳ ಪಟ್ಟಿಯ ಕಾಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ ಸಹ-ಸಾಲಗಾರರು/ ಜಾಮೀನುದಾರರು/ಅಡಮಾನದಾರರುಗಳಿಗೆ ಡಿಮಾಂಡ್ ನೋಟೀಸ್ ಜಾರಿಮಾಡಿ ನೋಟೀಸ್‌ನಲ್ಲಿ ನಮೂದಿಸಲಾದ ಬಾಕಿ ಸಾಲದ ಮೊಬಲಗು ಮತ್ತು ತದನಂತರದ ಬಡ್ಡಿ ಸೇರಿದ ಮೊತ್ತವನ್ನು ಡಿಮಾಂಡ್ ನೋಟೀಸ್‌ನ ದಿನಾಂಕದಿಂದ 60 ದಿನಗೊಳಗಾಗಿ ತೀರಿಸಬೇಕೆಂದು ಸೂಚಿಸಲಾಗಿತ್ತು. ಆದರೆ ಕೆಲವು ವಿವಿಧ ಕಾರಣಗಳಿಂದ ನೋಟೀಸ್‌ಗಳ ಸರ್ವ್ ಮಾಡಲಾಗಲಿಲ್ಲ.

ಕ್ರ. ಸಂ	ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ ಅಡಮಾನದಾರರ ಹೆಸರು	ಸಾಲದ ಸಂಖ್ಯೆ ಮತ್ತು ಸಾಲದ ಮೊತ್ತ	ಪರಿಮಾಣಕ್ಕೆ ಒಳಗಾಗುವ ಭದ್ರತಾ ಆಸ್ತಿಯ ವಿವರಣೆ	ಎನ್‌ಪಿಎ ಮತ್ತು ಡಿಮಾಂಡ್ ನೋಟೀಸ್‌ನ ದಿನಾಂಕ	ಬಾಕಿ ಮೊತ್ತ ರೂ./ಗಳಲ್ಲಿ ಕೆಳಕಂಡಂತೆ ಇದ್ದಂತೆ
1	1) ಶ್ರೀ ಶಂಕರಪ್ಪ, S/o. ದಿವಂಗತ ಮಹಾದೇವಪ್ಪ, 2) ಶ್ರೀಮತಿ ಲಕ್ಷ್ಮಿ ಹೆಚ್, 3) ಶ್ರೀ ನರಸಪ್ಪ ಎಂ, 4) ಶ್ರೀಮತಿ ಪಾರ್ವತಮ್ಮ ಎನ್	Loan Account No. 45489430000016 Loan Amount: Rs.5,96,468/-	ಅಡಮಾನಿತ ಸ್ಥಿರಾಸ್ತಿ: ಕೃಷಿಯೇತರ ವಸತಿ ಆಸ್ತಿ, ವಸತಿ ಮನೆ MPL. No.4-4-400/27 ರಲ್ಲಿ ನಿರ್ಮಾಣಗೊಂಡ ಪ್ಲಾಟ್ ಸಂ. 27, ಅಳತೆ 30 ಅಡಿX40 ಅಡಿ = 1200 ಚದರ ಅಡಿ (9 Mts X 12 Mts = 108 ಚದರ ಮೀಟರ್) ಭರತ್ ನಗರ,ಯರ್ಗೇರಾ ರಸ್ತೆ. ರಾಯಚೂರು, ಸಿಎಂಸಿ ಮಿತಿಗೊಳಪಟ್ಟಿದೆ ಮತ್ತು ರಾಯಚೂರು ಮತ್ತು ರಾಯಚೂರು ಉಪ ನೋಂದಣಿದಾರರ ಮಿತಿಗೊಳಪಟ್ಟಿದೆ. ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: MPL. ಸಂ.4-4-400/26, ಪಶ್ಚಿಮಕ್ಕೆ: MPL.ಸಂ. 4-4-400/28, ಉತ್ತರಕ್ಕೆ: 20 ಅಡಿ ಅಗಲದ ರಸ್ತೆ, ದಕ್ಷಿಣಕ್ಕೆ: MPL ಸಂ. 4-4-400/56.	Date of NPA: 03-03-2026 Demand Notice Date: 24-03-2026	ರೂ.4,91,652.27 (ನಾಲ್ಕು ಲಕ್ಷದ ತೊಂಭತ್ತೊಂದು ಸಾವಿರದ ಆರುನೂರ ಐವತ್ತೆರಡು ರೂ.ಮತ್ತು ಇಪ್ಪತ್ತೇಳು ಪೈಸೆಗಳು ಮಾತ್ರ)ಬಾಕಿ 22-03-2026 ರಂದು ಇದ್ದಂತೆ
2	1) ಶ್ರೀ ಯುವರಾಜ್, S/o ಪಾಂಡು, 2) ಶ್ರೀ ಪಾಂಡು ಜಾಧವ್, S/o ದಾಕು ಜಾಧವ್	Loan Account No. 45459630001642 45459410001980 Loan Amount: Rs.5,00,000/- Rs.1,50,000/-	ಅಡಮಾನಿತ ಸ್ಥಿರಾಸ್ತಿ: ವಸತಿ ಆಸ್ತಿ ಮನೆ ಪಂಚಾಯತ್ ಸಂ.3/20/I. ಅಳತೆ 125.4191 ಚ.ಮೀ.ಗಳು ಪ್ಲಿಂತ್ ಪ್ರದೇಶ 125.4191 ಚ.ಮೀ., ನಂದೂರು (ಕೆ) ಗ್ರಾಮ ತಾ|| ಮತ್ತು ಜಿಲ್ಲೆ ಕಲಬುರಗಿ ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸುನೀತಾ ಅವರ ಮನೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ.	Date of NPA: 03-03-2026 Demand Notice Date: 25-03-2026	ರೂ.5,53,072.65 (ಐದು ಲಕ್ಷದ ಐವತ್ತಮೂರುಸಾವಿರದ ಎಪ್ಪತ್ತೆರಡು ರೂ. ಮತ್ತು ಅರವತ್ತೈದು ಪೈಸೆಗಳು ಮಾತ್ರ)ಬಾಕಿ 22-03-2026 ರಂದು ಇದ್ದಂತೆ

ಆದುದರಿಂದ ಕಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರರು ಮತ್ತು ಅಡಮಾನದಾರರುಗಳಿಗೆ ಸೂಚನೆ ನೀಡಿ ಕರೆ ನೀಡುವುದೇನೆಂದರೇ ಸಂಬಂಧಿಸಿದ ಸಾಲಗಾರರು/ಸಹಸಾಲಗಾರರ ಕಲಂ 6ರ ಎದುರಾಗಿ ಸೂಚಿಸಲಾದ ದಿನಾಂಕದಂದು ಬಾಕಿ ಇದ್ದಂತೆ ಮತ್ತು ಪಾವತಿಸಬೇಕೆಂಬುದಾಗಿ ಕಂಡು ಬಂದ ಕಲಂ 6ರಲ್ಲಿ ತೋರಿಸಿದಂತೆ ಬಾಕಿ ಮೊತ್ತವನ್ನು ಸೂಚನೆ ಪ್ರಕಟಿಸಿದ 60 ದಿನಗಳ ಒಳಗಾಗಿ ಪಾವತಿ ಮಾಡಲೇಬೇಕು. ಒಟ್ಟಾರೆ ಮೊತ್ತ ಜೊತೆಗೆ ತದನಂತರದ ಬಡ್ಡಿ ಮತ್ತು ಪಾವತಿಯಾಗುವ ದಿನಾಂಕದವರೆಗೆ ಪಾವತಿಸಬೇಕಾದ ಇತರೆಗಳನ್ನು ಸೇರಿದ ಬಾಕಿ ಸಾಲದ ಮೊತ್ತ ಪಾವತಿಯಾಗದೇ ಇದ್ದ ಪಕ್ಷದಲ್ಲಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಆದ ನಾವು ಕಲಂ 4ರಲ್ಲಿ ತೋರಿಸಲಾದ ಆಸ್ತಿಗಳ ಮೇಲೆ ಭದ್ರತಾ ಹಿತಾಸಕ್ತಿಯನ್ನು ಜಾರಿ ಮಾಡುವ ಸಮಂಜಸ ಕ್ರಮ ಕೈಗೊಳ್ಳಲಾಗುವುದು ಅನಿವಾರ್ಯವಾಗುತ್ತದೆ. ಸದರಿ ಫೈನಾನ್ಸಿಯಲ್‌ನ ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ಅಡಮಾನದರರ ವಿರುದ್ಧ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಗೆ ಲಭ್ಯವಾಗುವ ಅಂತಹ ಹಕ್ಕುಗಳು ಮತ್ತು ಪರಿಹಾರಗಳ ಬಗ್ಗೆ ಪೂರ್ವಾಗ್ರಹವಿಲ್ಲದೇ ಈ ನೋಟೀಸನ್ನು ಹೊರಡಿಸಲಾಗಿದೆ. ನಿಮಗೆ ನೀಡುವ ಎಚ್ಚರಿಕೆಯೇನೆಂದರೇ ಸದರಿ ಕಾಯಿದೆಯ ಕಲಂ 13(13)ರನ್ವಯ ನೀವು ಮೇಲಿನ ಭದ್ರತೆಯ ಬಗ್ಗೆ ಯಾವುದೇ ವ್ಯವಹಾರ ಮಾಡದಂತೆ/ ಭದ್ರತೆಯನ್ನು ವಿಲೇವಾರಿ ಮಾಡದಂತೆ ಅಥವಾ ಭದ್ರತಾ ಆಸ್ತಿಯನ್ನು ಭದ್ರತಾ ಸಾಲಿಗರ (ಸೆಕ್ಯೂರ್ಡ್ ಕ್ರೆಡಿಟರ್) ಪೂರ್ವಾನುಮತಿಯಿಲ್ಲದೇ ಮಾರಾಟ ಮಾಡದಂತೆ ಅಥವಾ ವರ್ಗಾಯಿಸದಂತೆ ಅಥವಾ ಇತರ ರೀತಿಯಲ್ಲಿ ಏನೂ ಮಾಡದಂತೆ ಪ್ರತಿಬಂಧಿಸಲಾಗಿದೆ.

ದಿನಾಂಕ: 26.03.2026, ಸ್ಥಳ: ರಾಯಚೂರು ಮತ್ತು ಕಲಬುರಗಿ

ಸಹಿ/– ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ